ಸಾಕ್ಷಿಯನ್ನು ದಿಃ 14.02.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಎಫ್ ಡಿ ವಕೀಲರಿಂದಃ**

ನನ್ನ ತಂದೆಯ ಹೆಸರು ಯಲ್ಲಪ್ಪ. ನನ್ನ ತಾಯಿಯ ಹೆಸರು ಭಿಮವ್ವ ಎಂದರೆ ಸರಿ. ನಾವು 4 ಜನ ಗಂಡು ಮಕ್ಕಳು ಎಂದರೆ ಸರಿ. ಇವರಲ್ಲಿ ಶಿವಪ್ಪ ಹಾಗೂ ಹನುಮಪ್ಪ ಎನ್ನುವವರು ಮೃತ ಪಟ್ಟಿದ್ದಾರೆ ಎಂದರೆ ಸರಿ. ಅವರು ಈ ದಾವೆಯಲ್ಲಿ 2 ಹಾಗೂ 3 ನೇ ಪ್ರತಿವಾದಿಯರು ಎಂದರೆ ಸರಿ. 1 ನೇ ವಾದಿ ಮಗಳು ಎಂದರೆ ಸರಿ. 2 ನೇ ವಾದಿ ನನ್ನ ಪತ್ನಿ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಕ್ರಮ ಸಂಖ್ಯೆ 1 ರಿಂದ 3 ಹಾಗೂ 6 ನೇ ಸ್ವತ್ತುಗಳು ನನ್ನ ತಂದೆಯಿಂದ ಬಂದ ಸ್ವತ್ತುಗಳು ಎಂದರೆ ಸರಿ. ನಂತರ ನಾವು 4 ಜನ ಸಹೋದರರು ಪಾಲು ವಿಭಾಗ ಮಾಡಿಕೊಂಡಿದ್ದೆವು ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವು ನನ್ನ ಹಿಸ್ಸೆಕ್ಕೆ ಬಂದ ಸ್ವತ್ತುಗಳು ಎಂದರೆ ಸಾಕ್ಷಿಯು ಕ್ರಮ ಸಂಖ್ಯೆ 1 ನ್ನು ಹೊರತು ಪಡಿಸಿ ಉಳಿದ ಸ್ವತ್ತುಗಳು ನನ್ನ ಭಾಗಕ್ಕೆಬಂದಿರುತ್ತವೆ ಎಂದು ನುಡಿಯುತ್ತಾರೆ. 6 ನೇ ಸ್ವತ್ತು ನಮ್ಮೆಲ್ಲರ ಸಹೋದರರ ಜಂಟಿ ಹೆಸರಿನಲ್ಲಿ ಇದೆ ಎಂದರೆ ಸರಿ. ರಿ ಸ ನಂ. 43/3 4 ಎಕರೆ 10 ಗುಂಟೆ ನನ್ನ ತಾಯಿಯಿಂದ ಬಂದ ಸ್ವತ್ತುಗಳು ಎಂದರೆ ಸರಿ. ನಾನು 10 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ . ನಮ್ಮ ಕುಟುಂಬಕ್ಕೆ ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ಬೇರೇ ಯಾವುದೆ ಆದಾಯವಿರುವುದಿಲ್ಲ ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ರಿ ಸ ನಂ. 1/36 ವಿಸ್ತಿರ್ಣ 1 ಗುಂಟೆ 8 ಆಣೆ ಸ್ವತ್ತನ್ನು ನನ್ನ ಹೆಸರಿಗೆ ಕ್ರಯಕ್ಕೆ ಹಿಡಿಯಲಾಗಿದೆ ಎಂದರೆ ಸಾಕ್ಷಿಯು ಅದು ನನ್ನ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ನಾನು ಪ್ರತ್ಯೆಕವಾಗಿ ದುಡಿಯುತ್ತಾ ಇದ್ದೆನು ಎಂದು ತೋರಿಸಲು ಹಾಗೂ ಪ್ರತ್ಯೇಕ ಆದಾಯವನ್ನು ಹೊಂದಿದ್ದೇನು ಎಂದು ತೊರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ. ಸದರಿ ಸ್ವತ್ತಿನಲ್ಲಿ ಶೆಡ್ಡು ಇರುತ್ತದೆ ಎಂದರೆ ಸರಿ. ಆ ಸ್ವತ್ತಿನಲ್ಲಿ ನಾವೆಲ್ಲರೂ ವಾಸವಾಗಿರುತ್ತೇವೆ ಎಂದರೆ ಸಾಕ್ಷಿಯು ವಾದಿಯರು ಮಾತ್ರ ವಾಸವಾಗಿದ್ದಾರೆ, ನಾನು ವಾಸವಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ನಾನು ವಾಸವಾಗಿದ್ದರೂ ಸಹ ವಾಸವಾಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ

ಆದಾಯದಿಂದ ಹಾಗೂ ನಾನು ಕುಟುಂಬದ ಕರ್ತನಾಗಿದ್ದರಿಂದ ನನ್ನ ಹೆಸರಿಗೆ ಕ್ರಯ ಪತ್ರವಾಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ನನ್ನ ಸ್ವಂತ ದುಡಿಮೆಯಿಂದ ಗಳಿಸಿದ ಆಸ್ತಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿಡಿ-1 ರಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಡಿ-1(ಎ) ಎಂದು ಗುರುತಿಸಲಾಗಿದೆ. ಸರ್ವೆ ನಂಬರ 81/1 ಕ ರಲ್ಲಿ ನನಗೆ ಅರ್ಧ ಹಾಗೂ 2 ನೇ ಪ್ರತಿವಾದಿಗೆ ಸಮನಾದ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಮೊದಲು ನನಗೆ ಅರ್ಧ ಹಾಗೂ 3 ನೇ ಪ್ರತಿವಾದಿಗೆ ಎಂದು ಉತಾರವಾಗಿತ್ತು ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಾನು 2 ನೇ ಪ್ರತಿವಾದಿಗೆ ಸದರಿ ಜಮೀನಿನ ನನ್ನ ಭಾಗದ ಜಮೀನನ್ನು ಬಿಟ್ಟು ಕೊಡುವುದು ಎಂದು ಮಾತು ಕತೆಯಾದ ಬಗ್ಗೆ ನಾನು ದಾಖಲೆಯನ್ನು ಹಾಜರು ಪಡಿಸಿಲ್ಲ. ಸಾಕ್ಷಿಯು ಸ್ವತಃ ವಾಟ್ನಿ ಪತ್ರವಾಗಿತ್ತು ಎಂದು ನುಡಿಯುತ್ತಾರೆ. ಸದರಿ ವಾಟ್ನಿ ಪತ್ರದಲ್ಲಿ ನನಗೆ 1 ಎಕರೆ ಹಾಗೂ ಶಿವಪ್ಪನಿಗೆ 1 ಎಕರೆ ಎಂದು ಬರೆಯಾಲಗಿದೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರದಲ್ಲಿ ನಾನು ಶಿವಪ್ಪನಿಗೆ ಸದರಿ 1 ಎಕರೆ ಜಮೀನನ್ನು ಬಿಟ್ಟು ಕೊಡುವುದು ಎಂದು ಬರವಣಿಗೆಯಾಗಿಲ್ಲ ಎಂದರೆ ಸರಿಯಲ್ಲ. ಯಾವುದೆ ಮಾತುಕತೆಯಾಗದೇ ಇದ್ದರೂ ಸಹ ನಿಡಿ-2 ರಲ್ಲಿ ಪಾಲು ವಿಭಾಗದಂತೆ 1 ಎಕರೆ ಜಮೀನನ್ನು ಬಿಟ್ಟು ಕೊಡುವುದು ಎಂದು ಮಾತು ಆಗಿತ್ತು ಎಂದು ಸುಳ್ಳು ಹೇಳಿಕೆ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿದ್ದರಿಂದ ಹಕ್ಕು ಬಿಟ್ಟು ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಈ ದಿನದವರೆಗೂ ನಾವೆಲ್ಲರೂ ಜಂಟಿಯಾಗಿ ಸಾಗುವಳಿ ಮಾಡುತ್ತಾ ಇರುತ್ತೇವೆ ಎಂದರೆ ಸರಿಯಲ್ಲ.

ರಿ ಸ ನಂ. 56/2 ಬಿ/2 ನೇ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಪಾಲು ವಿಭಾಗದಲ್ಲಿ ಈ ಜಮೀನನ್ನು ಸೇರಿಸಿರಲಿಲ್ಲ ಎಂದರೆ ಸರಿ. ರಿ ಸ ನಂ. 351/3 ರಲ್ಲಿ ನನಗೆ 1/4 ಅಂಶ ಹಿಸ್ಸೆ ಇತ್ತು ಎಂದರೆ ಸರಿ. ಮೇಲೆ ಹೇಳಿದ ಎರಡು ಜಮೀನುಗಳಲ್ಲಿ ವಾದಿಯರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿ.

ನನ್ನ ತಾಯಿಯಿಂದ ಬಂದಂತಹ ಜಮೀನು ರಿ ಸ ನಂ. 43/3 ನೇ ಜಮೀನು 4

ಜನರಿಗೆ ಸಮನಾಗಿ ಹೋಗಬೇಕು ಎಂದು ಹೇಳಿದ್ದರು ಎಂದರೆ ಸರಿ. ವಿ ಪಿ ಸಿ ನಂ. 197 ರಲ್ಲಿ ನಾನು ರೂ. 5000 ಹಣವನ್ನು ಪಡೆದುಕೊಂಡು ಹಕ್ಕನ್ನು ಬಿಟ್ಟು ಕೊಟ್ಟಿರುತ್ತೇನೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ. ಸದರಿ ಸ್ವತ್ತಿನ ಈಗಿನ ಮಾರುಕಟ್ಟೆಯ ಮೌಲ್ಯ 4-5 ಲಕ್ಷ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ 5000 ಪಡೆದುಕೊಂಡು ಉಳಿದ 3 ಜನರಿಗೆ ಸಮನಾಗಿ ಭಾಗ ಕೊಡಲು ತಯಾರಿರುತ್ತೇನೆ ಎಂದು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನನಗೆ ಇರುವ ಭಾಗದಲ್ಲಿ ವಾದಿಯರಿಗೆ ಹಿಸ್ಸೆ ಇರುತ್ತದೆ ಎಂದರೆ ಸಾಕ್ಷಿಯು ಅವರು ತೆಗೆದುಕೊಳ್ಳಬಹುದು ಎಂದು ನುಡಿಯುತ್ತಾರೆ. 1 ನೇ ವಾದಿಯನ್ನು ನನ್ನ ಪತ್ನಿಯ ಖಾಸ ಸಹೋದರನಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ಅವರ ಮದುವೆಗೆ ಸಾಲ ಮಾಡಿರುತ್ತೇನೆ ಎಂದು ತೋರಿಸಲು ಹಾಗೂ ಸದರಿ ಸಾಲಕ್ಕೆ ಈಗಲೂ ಸಹ ಬಡ್ಡಿ ಪಾವತಿಸುತ್ತಾ ಇರುತ್ತೇನೆ ಎಂದು ತೊರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ. 2 ಲಕ್ಷ ಜೀವನಾಂಶವಾಗಿ 2 ನೇ ವಾದಿಗೆ ನೀಡಿರುತ್ತೇನೆ ಎಂದು ತೊರಿಸಲು ದಾಖಲೆಯನ್ನು ಹಾಜರು ಪಡಿಸಿಲ್ಲ. 2 ಲಕ್ಷ ಅವಳ ಜೀವನಾಂಶಕ್ಕಾಗಿ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಿ ಸ ನಂ. 733/3+4/ಎ ವಿಸ್ತೀರ್ಣ 1 ಎಕರೆ 12 ಗುಂಟೆ ಕೊಣ್ಣೂರು ಗ್ರಾಮದ ಜಮೀನು ನನ್ನ ಬಳಿ ಇತ್ತು ಎಂದರೆ ಸರಿ. ಆ ಜಮೀನನ್ನು ನಾನು ಹಾಗೂ ವಾದಿಯರು ಸೇರಿಕೊಂಡು 1997 ರಲ್ಲಿ ಹನುಮಪ್ಪ ರಾಮಪ್ಪ ಐನಾಪುರ ಇವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಹನುಮಪ್ಪನು ಸದರಿ ಸ್ವತ್ತನ್ನು ಪ್ರತಿವಾದಿ 2(ಬಿ) ಇವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಸರ್ವೇ ನಂಬರ 61/1 ಎ, 351/4, 518/2 ಸಿ ನೇ ಆಸ್ತಿಗಳು ನಮ್ಮ ಕುಟುಂಬಕ್ಕೆ ಇದ್ದವು ಎಂದರೆ ಸರಿ. ಈ ಸ್ವತ್ತುಗಳೆಲ್ಲವು ನನ್ನ ಸಹೋದರರಾದ 2 ರಿಂದ 4 ನೇ ಪ್ರತಿವಾದಿಯರ ಭಾಗಕ್ಕೆ ಹೋಗಿರುತ್ತವೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಪಾಲು ವಿಭಾಗ ಕೊಡಬಾರದು ಎನ್ನುವ ಉದ್ದೇಶದಿಂದ ನನ್ನ ಸಹೋದರರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ವಿಭಾಗದಲ್ಲಿ ನನ್ನ ಭಾಗಕ್ಕೆ ಬಂದ ಸ್ವತ್ತುಗಳನ್ನು ನಾನು ಹಾಗೂ ವಾದಿಯರು ಜಂಟಿಯಾಗಿ ಸಾಗುವಳಿ ಮಾಡುತ್ತಾ ಇರುತ್ತೇವೆ ಎಂದರೆ ಸರಿಯಲ್ಲ. ಮು. ವಿ. ಪ್ರಮಾಣ ಪತ್ರದಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ: 14.02.2022

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.